S C.R.P.67

| Form No.4 (Criminal) Deposition Sheets (R.P.No.57) |
|---|

**5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**

**ನ್ಯಾಯಾಲಯ, ಮಂಡ್ಯ**

# ಸ್ಪೆಷಲ್ ಕೇಸ್ ನಂಬರ್ 89/2021

**ಚಾ.ಸಾ.–9 ಪ್ರಾ.ಸಾ.–10**

| | |
|---|---|
| **ಸಾಕ್ಷಿದಾರರ ಹೆಸರು** | **ಭೂಮಿಕಾ** |
| **ತಂದೆಯ ಹೆಸರು** | **ನಾಗರಾಜು** |
| **ವಯಸ್ಸು** | **17 ವರ್ಷಗಳು** |
| **ಉದ್ಯೋಗ** | **ಪ್ರಥಮ ಪಿಯುಸಿ ವಿದ್ಯಾಭ್ಯಾಸ** |
| **ವಾಸ** | **ಎ ಹುಲಿಕೆರೆ ಗ್ರಾಮ** |

**ದಿನಾಂಕಃ 25–08–2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1) ಈ ಪ್ರಕರಣದ ಮೃತ ನಾಗರಾಜುರವರು ನನ್ನ ತಂದೆ . ಚಾಸಾ–1 ನನ್ನ ತಾಯಿ . ಚಾಸಾ 7 ನನ್ನ ಅತ್ತೆ . ಚಾಸಾ 8 ನನ್ನ ಅಜ್ಜಿ . ಚಾಸಾ 10 ನನ್ನ ತಾತ. ನಾವು ಪರಿಶಿಷ್ಟ ಜಾತಿಯ ಶಿಳ್ಳೆಕ್ಯಾತ ಜನಾಂಗಕ್ಕೆ ಸೇರಿದವರು. ನನಗೆ ಚಾಸಾ-11 ರಿಂದ 17 ರವರ ಪರಿಚಯವಿದೆ. ಅವರೆಲ್ಲರು ನಮ್ಮ ಗ್ರಾಮದವರು. ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ನನಗೆ ಇದೆ. ಅವರು ನಮ್ಮ ಊರು , ಮೊಳೆಕೊಪ್ಪ ಮತ್ತು ಕಿರಗಂದೂರು ಗ್ರಾಮದವರು. ಅವರು ಯಾವ ಜಾತಿಯವರು ಎಂದು ನನಗೆ ಗೊತ್ತಿಲ್ಲ. ದಿನಾಂಕ 10–03–2021 ರಂದು ನನ್ನ ತಂದೆಯನ್ನು ಆರೋಪಿ ಶಿವಕುಮಾರ ಕೆಲಸಕ್ಕೆ ಕರೆದುಕೊಂಡು ಹೋಗಿದ್ದರು. ಮರ ಕುಯ್ಯುದು ಬರೋಣಾ ಎಂದು ಕರೆದುಕೊಂಡು ಹೋಗಿದ್ದರು. ನನಗೆ ಪರೀಕ್ಷೆ ಇದ್ದುದರಿಂದ ಶಾಲೆಗೆ ಹೋಗಿದ್ದೆ . ಶಾಲೆಗೆ ಬಂದು ನನ್ನ ತಂದೆಗೆ ಅಪಘಾತವಾಗಿರುವ ಬಗ್ಗೆ ಹೇಳಿರುತ್ತಾರೆ. ಮತ್ತು ರೇಷನ್ ಕಾರ್ಡ್ , ಆಧಾರ ಕಾರ್ಡ್ ಬೇಕಾಕಿರುವುದರಿಂದ ನೀನು ಬರಬೇಕು ಎಂದು ಕರೆದಿದ್ದಾರೆ . ನಾನು ಮದ್ಯಾಹ್ನ 11–30 ಸಮಯಕ್ಕೆ ವಾಪಸ್ಸು ಮನೆಗೆ ಬಂದಿರುತ್ತೇನೆ. ನನ್ನ ತಾಯಿಯನ್ನು ವಿಚಾರಿಸಿದಾಗ ನನ್ನ ಅಪ್ಪನಿಗೆ

ಅಪಘಾತವಾಗಿರುತ್ತದೆ ಎಂದು ಹೇಳಿರುತ್ತಾರೆ. ನನ್ನ ತಂದೆಯನ್ನು ಮಂಡ್ಯದ ಜಿಲ್ಲಾಸ್ಪತ್ರೆಗೆ ದಾಖಲು ಮಾಡಿದ್ದರು. ನಮ್ಮ ಅಜ್ಜಿ ಮತುತ ನನ್ನ ತಾಯಿ ಮತ್ತು ಇತರರು ಆಸ್ಪತ್ರೆಗೆ ಬಂದಿದ್ದರು. ನಂತರ ಆರೋಪಿ ಸಂದೀಪ ಮತ್ತು ಶಿವಕುಮಾರವರು ನಮ್ಮ ಮನೆಯ ಬಳಿ ಬಂದು ಹಣ ಎಷ್ಟೆ ಖರ್ಚಾಗಲೀ ದೂರು ಕೊಡಬೇಡಿ ಎಂದು ಹೇಳಿರುತ್ತಾರೆ. ನಾವು ಈ ವಿಚಾರವನ್ನು ನನ್ನ ಅಜ್ಜ ನನ್ನ ಅತ್ತೆಗೆ ಪೋನ್ ಮಾಡಿ ಹೇಳಿರುತ್ತಾರೆ. ಈ ಬಗ್ಗೆ 3 ದಿನ ಆದ ನಂತರ ಯೋಗಾನಂದಪಟೇಲ್ ಮನೆ ಬಳಿ ಪಂಚಾಯಿತಿ ಸೇರಿರುತ್ತಾರೆ. ಪಂಚಾಯಿತಿಗೆ ಆಗ ನಮ್ಮ ಮನೆಯವರು ಮತ್ತು ಆರೋಪಿತರ ಕಡೆಯಿಂದ ಕಾಯಿ ಕೀಳಲು ಕರೆದಕೊಂಡು ಹೋದವರು ಬಂದಿದ್ದರು. ಆರೋಪಿ ಶಿವಕುಮಾರ ಬಂದಿರಲಿಲ್ಲ. ನಾನು ಮಾತುಕತೆಗೆ ಹೋಗಿರಲಿಲ್ಲ ನಾನು ಈಚೆ ಇದ್ದೆ . 2 ಲಕ್ಷ ರೂಪಾಯಿಯನ್ನು ಜಮೀನಿನ ಮಾಲಿಕರು ಕೊಟ್ಟಿರುತ್ತಾರೆ. ಕಾಯಿ ಕೀಳಲು ಕರೆದುಕೊಂಡು ಹೋದವರು 1 ಲಕ್ಷ ರೂಪಾಯಿ ಕೊಟ್ಟಿರುತ್ತಾರೆ. ಆರೋಪಿ ಶಿವಕುಮಾರರವರು ಹಣ ಕೊಡುವುದಿಲ್ಲ ವೆಂದು ಹೇಳಿರುತ್ತಾರೆ. ಈ ಬಗ್ಗೆ ಅವರ ಮನೆ ಬಳಿ ಕೇಳಿದಾಗ ಅವರು ನಾನು ಕೊಡುವುದಿಲ್ಲ ಏನು ಬೇಕಾದರೂ ಮಾಡಿಕೊಳ್ಳಿ ಎಂದಿದ್ದಾರೆ . ಅಲ್ಲದೇ ಆರೋಪಿ ಸಂದೀಪರವರು ನನ್ನ ಅತ್ತೆಯನ್ನು ಬೀಳಿಸಿದ್ದಾರೆ ಮತ್ತು ಜಾತಿಯ ಬಗ್ಗೆ ಬೈದಿದ್ದಾರೆ . ಅಂದರೆ ನೀವು ಸಿಳ್ಳೇಕ್ಯಾತೆ ಜನ ಏನು ಮಾಡಿಕೊಳ್ಳುತ್ತೀರಿ ಎಂದು ಬೈದಿದ್ದಾರೆ. ಆನಂತರ ನಾವು ಈ ಬಗ್ಗೆ ದೂರು ಕೊಟ್ಟಿದ್ದೇವೆ. ನಮ್ಮ ತಂದೆಯನ್ನು ಸಾಂಜೋ ಆಸ್ಪತೆರಗೆ ಸೇರಿಸಿ , ನಂತರ ಬೆಂಗಳೂರಿನ ಸಾಯಂಬಿಕಾ ಆಸ್ಪತ್ರೆಗೆ ಸೇರಿಸಲಾಗಿತ್ತು . ಬೆಂಗಳೂರಿನ ಆಸ್ಪತ್ರೆಗಳಲ್ಲಿ ಸಮಾರು 11 ದಿನ ಇದ್ದರು. ಆನಂತರ ನನ್ನ ತಂದೆಯನ್ನು ಒಂದು ದಿನ 4 ಗಂಟೆಗೆ ಮಂಡ್ಯ ಜಿಲ್ಲಾಸ್ಪತ್ರೆಗೆ ಕರೆದುಕೊಂಡು ಬರಲಾಯಿತು. ಮಾರನೇ ದಿನ ಬೆಳಗ್ಗೆ 5 ಗಂಟೆಗೆ ನಮ್ಮ ತಂದೆ ತೀರಿಕೊಂಡ ವಿಚಾರ ಗೊತ್ತಾಗಿರುತ್ತದೆ. ನಮ್ಮ ತಂದೆ ಮರದಿಂದ ಬಿದ್ದು ಪೆಟ್ಟಾಗಿ ತೀರಿಕೊಂಡಿರುತ್ತಾರೆ. ಆ ದಿನ ನನ್ನ ಅತ್ತೆಗೆ ಬೈದ ವ್ಯಕ್ತಿಗಳು ಈ ದಿನ ನ್ಯಾಯಾಲಯದ ಮುಂದೆ ಇದ್ದಾರೆ. ಈ ವಿಚಾರವನ್ನು ಪೊಲೀಸರಿಗೆ ಹೇಳಿದ್ದೇನೆ. ಈ ಬಗ್ಗೆ ನ್ಯಾಯಾಲಯದ ಮುಂದೆ ಹೇಳಿಕೆ ಕೊಟ್ಟಿದ್ದೇನೆ. ಅದನ್ನು ಈಗ ನೋಡುತ್ತಿದ್ದು , ಅದನ್ನು ಈಗ ನಿಪಿ 23 ಎಂದು, ಸಾಕ್ಷಿಯ ಸಹಿಯನ್ನು ನಿಪಿ 23–ಎ ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿತರ ಪರ ಶ್ರೀ ಹೆಚ್ ಡಿ ಆರ್ ವಕೀಲರಿಂದಃ**

ನಾನು ಪ್ರಥಮ ಪಿಯುಸಿ ಓದುತ್ತಿದ್ದೇನೆ. ಸಂದೀಪ ಮತ್ತು ಶಿವಕುಮಾರ ಮನೆಗಳ ನಡುವಿನ ಅಂತರ ಅರ್ಧ ಕಿಲೋಮೀಟರ ಇರಬಹುದು. ಅವರಿಬ್ಬರು ಸಂಬಂಧಿಕರಲ್ಲ ಎಂದರೆ ಸರಿ . ನಮ್ಮ ತಂದೆ ಸುಮಾರು ವರ್ಷಗಳಿಂದ ಕಾಯಿ ಕೀಳುವ ಮರ ಕಡಿಯುವ ಕೆಲಸ ಮಾಡುತ್ತಿದ್ದರು . ನಮ್ಮ ತಂದೆ ಬಳಿ ಮರ ಕುಯ್ಯಲು ಬಳಸುವ ಯಂತ್ರಗಳು ಇದ್ದವು. ಮತ್ತು ಹಗ್ಗ ಕೂಡಾ ಇತ್ತು . ನಮ್ಮ ತಂದೆ ಮರ ಕುಯ್ಯುವ ಮತ್ತು ಕಾಯಿ ಕೀಳುವ ಕಸಬಿನಿಂದ ಜೀವನ ಮಾಡುತ್ತಿದ್ದರು. ನಮ್ಮ ತಂದೆಗೆ ಮದ್ಯಪಾನ ಮಾಡುವ ಅಭ್ಯಾಸ ಇತ್ತು . ಅವರು ದ್ವಿಚಕ್ರ ವಾಹನ ಬಳಸುತ್ತಿದ್ದರು. ಯೋಗಾನಂದ ಪಟೇಲ್ ರವರ ಮುಂದಾಳತ್ವದಲ್ಲಿ ದೂರು ದಾಖಲು ಮಾಡಲಾಗಿದೆ. ಅವರು ಜಿಲ್ಲಾ ಪಂಚಾಯಿತಿಯ ಸದಸ್ಯರಾಗಿದ್ದರು. ನಾವು ಅವರಿಗೆ ಚುನಾವಣೆಯಲ್ಲಿ ಸಹಕಾರ ಮಾಡಿದ್ದೇವು .

ನಮ್ಮ ತಂದೆಯನ್ನು ಆರೋಪಿ ಕೆಲಸಕ್ಕೆ ಕರೆದುಕೊಂಡು ಹೋಗುವಾಗ ನಾನು ಇದ್ದೆ . ಆ ದಿನ ಅವರು ಯಥಾಸ್ಥಿತಿಯಲ್ಲಿ ಖುಷಿ ಖುಷಿಯಲ್ಲಿ ಕೆಲಸಕ್ಕೆ ಹೋದರು. ಅವರು ಕೆಲಸಕ್ಕೆ ಹೋಗುವುದಿಲ್ಲವೆಂದು ವಿರೋದ ವ್ಯಕ್ತಪಡಿಸಲಿಲ್ಲ. ನಮ್ಮ ತಂದೆ ಆ ದಿನ ದ್ವಿಚಕ್ರ ವಾಹನದಲ್ಲಿ ಹೋಗಿರುತ್ತಾರೆ. ಅವರು ಅವರ ದ್ವಿಚಕ್ರ ವಾಹನದಲ್ಲಿಯೇ ಹೋಗಿರುತ್ತಾರೆ. ಅವರು ಕಿರಗಂದೂರಿನ ಜಮೀನಿನಲ್ಲಿ ಮರ ಕಡಿಯಲು ಹೋಗುತ್ತೇನೆ ಎಂದು ಹೇಳಿರುತ್ತಾರೆ. ಯಾರ ಜಮೀನಿನಲ್ಲಿ ಎಂದು ಹೇಳಲಿಲ್ಲ. ನಮ್ಮ ತಂದೆ ಹೋದಾಗ ನಾನು , ನನ್ನ ತಮ್ಮ , ನನ್ನ ತಾಯಿ ಮನೆಯಲ್ಲಿ ಇದ್ದೇವು. ನಾನು ಶಾಲೆಯಲ್ಲಿ ಇರುವಾಗ ನಮ್ಮ ಅಜ್ಜಿ ಬಂದು ನನಗೆ ಹೇಳಿದಾಗ ವಿಷಯ ಗೊತ್ತಾಗಿರುತ್ತದೆ. ಆಗ ಮದ್ಯಾಹ್ನ 3-4 ಗಂಟೆ ಆಗಿರಲಿಲ್ಲ. ಆಗ ಸುಮಾರು 11 ಗಂಟೆ ಆಗಿತ್ತು. ನಮ್ಮ ಅಜ್ಜಿ ನನ್ನ ತಂದೆ ದ್ವಿ ಚಕ್ರ ವಾಹನದಿಂದ ಬಿದ್ದಿರುತ್ತಾರೆ ಎಂದು ಹೇಳಿರುತ್ತಾರೆ ಆದರೆ ಎಲ್ಲಿ ಬಿದ್ದರು ಎಂದು ಹೇಳಿರುವುದಿಲ್ಲ. ಘಟನೆಯ ದಿನ ನಾನು ಆಸ್ಪತ್ರೆಗೆ ಹೋಗಿಲ್ಲವೆಂದರೆ ಸರಿ . ನಮ್ಮ ತಾಯಿ ಹೋಗಿದ್ದರು ಎಂದು ಹೇಳುತ್ತಾರೆ. ಚಂದ್ರುರವರು ನಮ್ಮ ತಂದೆಯ ಸ್ನೇಹಿತರು. ಅವರು ಜೊತೆ ನಾವು ಚೆನ್ನಾಗಿದ್ದೆವೆ. ನನ್ನ ತಂದೆ ಪೆಟ್ಟಾದ ನಂತರ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ . ನ್ಯಾಯ ಪಂಚಾಯಿತಿ ಮಾಡಿದ

ದಿನಾಂಕ ನನಗೆ ಗೊತ್ತಿಲ್ಲ. ಕಿರಂಗಂದೂರಿನವರು 2 ಲಕ್ಷ ಹಣ ಕೊಟ್ಟಿದ್ದಾರೆ ಅವರು ಯಾರು ಎಂದು ನನಗೆ ಗೊತ್ತಿಲ್ಲ. ಶಿವಕುಮಾರ ಮತ್ತು ಸಂದೀಪ್ ರವರು ಘಟನೆಯ ದಿನವೇ ನಮ್ಮ ಮನೆ ಬಳಿ ಬಂದಿದ್ದರು. ಘಟನೆಯ ದಿನವೇ ನಾವು ಆರೋಪಿತರ ಮನೆ ಬಳಿ ಹೋಗಿದ್ದೆವು . ಅಲ್ಲಿಗೆ ನಾನು , ನಮ್ಮ ಅತ್ತೆ , ನಮ್ಮ ಅಜ್ಜಿ , ಶಾರದ , ಮಂಗಳೆ ಎಂಬುವವರು ಹೋಗಿದ್ದೆವು . ಆಗ ಸಂಜೆ 8 ಗಂಟೆ ಸಮಯ ಆಗಿತ್ತು . ನಾವು ಆರೋಪಿತರ ಮನೆಯ ಬಳಿ ಯಾವತ್ತು ಹೋಗಲಿಲ್ಲವೆಂದರೆ ಸರಿಯಲ್ಲ. ಆರೋಪಿ ಸಂದೀಪ್ ತಳ್ಳಿದ್ದರಿಂದ ನಮ್ಮ ಅತ್ತೆಗೆ ಗಾಯವಾಗಲಿಲ್ಲ. ಆರೋಪಿ ಸಂದೀಪ ತಳ್ಳಿದ ವಿಚಾರವನ್ನು ನ್ಯಾಯಾಧೀಶರ ಬಳಿ ಮತ್ತು ಪೊಲೀಸರ ಬಳಿ ಹೇಳಿಕೆ ಕೊಡುವಾಗ ಹೇಳಿದ್ದೇನೆ. ಆ ರೀತಿ ನಾನು ಹೇಳಿಕೆ ಕೊಡಲಿಲ್ಲ ಎಂದರೆ ಸರಿಯಲ್ಲ. ಇದೆ ಮೊದಲು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಶಿವಕುಮಾರು ಮತ್ತು ಸಂದೀಪ ನಮ್ಮ ಮನೆ ಬಳಿ ಬಂದು ನಮಗೆ ಎಷ್ಟೇ ಖರ್ಚಾಗಲೀ ನಾವು ಕೊಡುತ್ತೇವೆ ಎಂದು ಹೇಳಿದರು ಎಂದು ಇದೆ ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲದೇ ಜಮೀನಿನ ಮಾಲೀಕರು 2 ಲಕ್ಷ ಕೊಟ್ಟರು ಎಂದು ಇದೆ ಮೊದಲಿಗೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ತಂದೆ ಮದ್ಯಪಾನ ಮಾಡಿ ದ್ವಿಚಕ್ರ ವಾಹನದಲ್ಲಿ ಹೋಗಿ ಬಿದ್ದು ಗಾಯ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರಿಂದ ಹಣ ವಸೂಲಿಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಾಜಕೀಯ ವೈರತ್ವದ ಕಾರಣ ಆರೋಪಿತರ ಮೇಲೆ ಸುಳ್ಳು ಪ್ರಕರಣ ದಾಖಲು ಮಾಡಲಾಗಿದೆ ಎಂದರೆ ಸರಿಯಲ್ಲ. ನಮ್ಮ ಅತ್ತೆಯ ಹೇಳಿಕೆ ಮೇರೆಗೆ ನ್ಯಾಯಾಧೀಶರ ಮುಂದೆ ಮತ್ತು ಪೊಲೀಸರು ಮುಂದೆ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಅವಾಚ್ಯ ಶಬ್ದ ಉಪಯೋಗಿಸಿಲ್ಲ , ಹಲ್ಲೆ ಮಾಡಿಲ್ಲ , ಜಾತಿನಿಂದನೆ ಮಾಡಿಲ್ಲ ವೆಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಆರೋಪಿತರ ಮೇಲೆ ಹೇಳಿರುವ ಎಲ್ಲಾ ವಿಷಯಗಳು ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಎಂ.ಸಿ ನಂಜೇಗೌಡ)**

5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ

ನ್ಯಾಯಾಲಯ, ಮಂಡ್ಯ